# ಶಕ್ತಿಪೀಠಗಳು ಮತ್ತು ಶಕ್ತ್ಯುಪಾಸನೆ - ಒಂದು ಮನನ

ಬ್ರಹ್ಮಚಾರಿ ಪವಿತ್ರಚೈತನ್ಯ

ಭಾರತದಲ್ಲಿ ಮಾತೃ ಆರಾಧನೆ ಅತ್ಯಂತ ಪ್ರಾಚೀನವಾದುದು. ವೇದ, ಆಗಮ, ಪುರಾಣಗಳ ಮೂಲಕ ಬೆಳೆದು ಬಂದ ಈ ಪರಂಪರೆಯು ಶಕ್ತಿಪೂಜೆಯ ಆವಿರ್ಭಾವದೊಂದಿಗೆ ಸಾಧನೆಯ ಮಾರ್ಗವಾಗಿಯೂ ರೂಪುತಳೆಯಿತು. ಈ ಹಿನ್ನೆಲೆಯಲ್ಲಿ ಭಾರತದ ಉದ್ದಗಲಕ್ಕೂ ಹರಡಿರುವ ಶಕ್ತಿಪೀಠಗಳಿಗೆ ವಿಶೇಷ ಮಹತ್ವವಿದೆ. ಈ ಕುರಿತು ಇಲ್ಲಿ ವಿವರಿಸಿರುವ ಲೇಖಕರು ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

**ಯಾ ದೇವೀ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ ।**
**ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ॥**

*(ಶ್ರೀ ದುರ್ಗಾಸಪ್ತಶತೀ, ೫.೧೨)*

'ಜಡ-ಚೇತನ ಸಕಲದರಲ್ಲಿಯೂ ಸುಪ್ತ ಮತ್ತು ವ್ಯಕ್ತಭಾವದಲ್ಲಿ ಅವಸ್ಥಿತಳಾದ ಶಕ್ತಿರೂಪಿಣಿ ದೇವಿಗೆ ಅನಂತ ನಮಸ್ಕಾರಗಳು.'

ಅಮ್ಮ, ಜನನಿ, ತಾಯಿ ಎಂದರೆ ಪ್ರತಿಯೊಂದು ಜೀವಿಗೂ ತನಗೆ ಜನ್ಮ ಕೊಡುವ, ಅತ್ಯಂತ - ಪ್ರೀತಿಪಾತ್ರವಾದ, ಗೌರವಪಾತ್ರವಾದ, ಹತ್ತಿರವಾದ ಒಂದು ಅಸ್ತಿತ್ವ. ತಾಯಿಯೇ ಜನ್ಮ ಕೊಟ್ಟು, ಪೋಷಿಸಿ, ರಕ್ಷಿಸಿ ಒಂದು ಜೀವಿಯನ್ನು ತನ್ನ ಕಾಲ ಮೇಲೆ ನಿಂತುಕೊಳ್ಳುವವರೆಗೂ ಅತ್ಯಂತ ನಿಃಸ್ವಾರ್ಥವಾಗಿ ಶ್ರಮಿಸುವಳು. ತಾಯಿಯೇ ಮೊದಲ ಗುರು. ಇದು ವ್ಯಷ್ಟಿಯಲ್ಲಾದರೆ, ಸಮಷ್ಟಿಯಲ್ಲಿ ಕೂಡ ಇಡೀ ಬ್ರಹ್ಮಾಂಡವನ್ನು ತನ್ನ ಗರ್ಭದಲ್ಲಿ ಧರಿಸಿ, ಜನ್ಮಕೊಟ್ಟು ಪೋಷಿಸಿ, ಪಾಲಿಸಿ, ರಕ್ಷಿಸುವ ಮಾತೃತತ್ತ್ವ ಉಂಟು ಎಂದು ಸಾಕ್ಷಾತ್ ಪರಮಾತ್ಮನೇ ಹೇಳುತ್ತಾನೆ, ಭಗವದ್ಗೀತೆಯಲ್ಲಿ.

**ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಮ್।**
**ಸಂಭವಃ ಸರ್ವಭೂತಾನಾಂ ತತೋ ಭವತಿ ಭಾರತ ॥**

*(ಭಗವದ್ಗೀತೆ, ೧೪.೩)*

'ಸೃಷ್ಟಿಯಾಗುವ ಮೊದಲು ಪರಾಪ್ರಕೃತಿಯಲ್ಲಿ ಗರ್ಭಾಧಾನವನ್ನು ಮಾಡುವೆನು. ಅದರಿಂದ ಚರಾಚರ ಜೀವಿಗಳು ಸೃಷ್ಟಿಯಾಗುವುವು.'

**ಅಪರೇಯಮಿತಃ ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಮ್ ।**
**ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್ ॥**

*(ಭಗವದ್ಗೀತೆ, ೭.೫)*

ಇದರ ಭಾವಾರ್ಥ, ಪರಾಪ್ರಕೃತಿಯೇ ಜಡ-ಚೇತನ ಸಕಲರೂಪವಾಗಿ ಇಡೀ ಬ್ರಹ್ಮಾಂಡವನ್ನೇ ಧರಿಸಿದ್ದಾಳೆ.

ವ್ಯಷ್ಟಿಯಲ್ಲಿರುವ ಪ್ರತಿಯೊಂದು ಜೀವಿಯ ತಾಯಿಗೂ, ಸಮಷ್ಟಿಯಲ್ಲಿರುವ ಇಡೀ ಬ್ರಹ್ಮಾಂಡದ ಮಾತೃತತ್ತ್ವಕ್ಕೂ ಇರುವ ವ್ಯತ್ಯಾಸವೆಂದರೆ - ಸಮಷ್ಟಿ ಮಾತೃತತ್ತ್ವ ತಾನು ಸೃಜಿಸಿದ್ದನ್ನು, ಪೋಷಿಸುವುದಲ್ಲದೆ, ತನ್ನೊಳಗೇ ಲಯಮಾಡಿಕೊಳ್ಳುತ್ತದೆ. ಈ ಕಾರ್ಯವನ್ನು ಕುರಿತು ಅದು ಅಭಿಮಾನ ಹೊಂದಿರುವುದಿಲ್ಲ. ಭಗವಾನ್ ಶ್ರೀರಾಮಕೃಷ್ಣರಿಗೆ ದಕ್ಷಿಣೇಶ್ವರದ ಗಂಗಾತೀರದಲ್ಲಿ ಆದ ಒಂದು ದರ್ಶನವು ಇದಕ್ಕೆ ಪೂರಕವಾಗಿದೆ. ಗಂಗೆಯಿಂದ



ಅತ್ಯಂತ ಸುಂದರವಾದ ಗರ್ಭಿಣಿ ಸ್ತ್ರೀ ಮೂರ್ತಿಯೊಂದು ಪ್ರಕಟವಾಗಿ ದಡಕ್ಕೆ ಬಂದು ಮಗುವಿಗೆ ಜನ್ಮ ನೀಡುತ್ತದೆ, ಅದನ್ನು ಲಾಲನೆ ಪಾಲನೆ ಮಾಡುತ್ತದೆ. ನೋಡುತ್ತಿರುವ ಹಾಗೆಯೇ ಅದೇ ಮೂರ್ತಿ ಭಯಂಕರವಾದ ರೂಪತಾಳಿ ಆ ಮಗುವನ್ನು ನುಂಗಿ ಹಾಕಿಬಿಡುತ್ತದೆ. ಈ ಜಗನ್ಮಾತೃತತ್ತ್ವವನ್ನು ಆಲೋಚಿಸಿ ನೋಡಿದರೆ ಏಕಕಾಲದಲ್ಲೇ ಸೃಷ್ಟಿ, ಸ್ಥಿತಿ ಮತ್ತು ಪ್ರಳಯ ರೂಪಗಳ 'ವಿಪರೀತ ಗುಣಧಾರಿಣಿ' ಅದು ಎಂಬ ಅರಿವಾಗುವುದು.

### ಶಕ್ತಿ, ಪ್ರತೀಕೋಪಾಸನೆ ಮತ್ತು ಶಕ್ತಿಪೂಜೆ

ಇದೇ ಮಾತೃತತ್ತ್ವವು ಪರಬ್ರಹ್ಮದ ಶಕ್ತಿಯೆಂದೂ ಕರೆಯಲ್ಪಡುತ್ತದೆ. ಅಗ್ನಿ ಮತ್ತು ಅದರ ಸುಡುವ ಶಕ್ತಿಯಂತೆ ಪರಬ್ರಹ್ಮಕ್ಕೂ ಶಕ್ತಿಗೂ ಅಭೇದ. ಇದೇ ಶಕ್ತಿಯನ್ನು ಆದ್ಯಾಶಕ್ತಿ, ಪರಾಶಕ್ತಿ, ಮಹಾಮಾಯೆಂದೂ ಕರೆಯಲಾಗುತ್ತದೆ.

ಶ್ರೀರಾಮಕೃಷ್ಣರ ಪಾರ್ಷದರಾದ ಸ್ವಾಮಿ ಸಾರದಾನಂದರು ಬರೆಯುತ್ತಾರೆ, ''ಬ್ರಹ್ಮ-ಮಾಯಾ ಎಂದು ಭಾರತದ ದಾರ್ಶನಿಕರು ಯಾವುದನ್ನು ಪ್ರಸ್ತಾಪಿಸಿರುವರೋ, ಅವು ಒಂದೇ ಕಾಲ

ದಲ್ಲಿ ಒಂದೇ ವಸ್ತುವಿನಲ್ಲಿ ತೋರುವ ಎರಡು ವಿಭಿನ್ನ ಭಾವ ವಿಶೇಷ. ಆದರೆ, ದೇಶಕಾಲಗಳಿಂದ ಸೀಮಿತವಾದ, ನಾಮ ರೂಪ ಗಳ ಮೂಲಕ ಬಾಹ್ಯಜಗತ್ತನ್ನು ಸದಾ ಅನುಭವಿಸುತ್ತಿರುವ ಮಾನ ವನ ಮನಸ್ಸಿಗೆ ಜಗದಂಬೆಯ ಈ ಎರಡೂ ಭಾವಗಳನ್ನು ಏಕ ಕಾಲದಲ್ಲಿ ಗ್ರಹಿಸುವುದು ಅಸಾಧ್ಯ. ಜಗತ್ಕಾರಣದ ಬಗ್ಗೆ ಪೂರ್ಣ ಸತ್ಯ ಅರಿಯಲು ಏಕಮಾತ್ರ ಪಥವೆಂದರೆ ನಿರ್ವಿಕಲ್ಪ ಸಮಾಧಿ ಯನ್ನು ಅನುಭವಿಸುವುದು.

''ಪ್ರತೀಕಗಳನ್ನು ಅವಲಂಬಿಸಿ ಪೂಜಿಸುವುದರಲ್ಲೂ ಶಕ್ತಿ ಪೂಜೆಯು ಸಮಾಧಿಪ್ರಾಪ್ತಿಗೆ ಸಹಾಯಕವೆಂದು ಭಾರತದ ಋಷಿಗಳು ಹಾಗು ಆಚಾರ್ಯರು ಅನಾದಿಕಾಲದಿಂದಲೂ ಸ್ವತಃ ಅನುಭವಿಸಿ ಜನಸಾಮಾನ್ಯರಲ್ಲೂ ಪ್ರಸಿದ್ಧಪಡಿಸಿದ್ದಾರೆ.

''ಆಂತರಿಕ ಮತ್ತು ಬಾಹ್ಯ ಜಗತ್ತಿನಲ್ಲಿರುವ ಯಾವ ವಿಶೇಷ ಪದಾರ್ಥಗಳು ಮಾನವನ ಮನಸ್ಸಿನಲ್ಲಿ ಸ್ವಾಭಾವಿಕವಾಗಿ ಆಂತ ರ್ಯದ ಭಾವವನ್ನು ಜಾಗೃತಗೊಳಿಸಿ, ಅವನನ್ನು ಜಗತ್ಕಾರಣದ ಅನ್ವೇಷಣೆ ಹಾಗೂ ಸಾಕ್ಷಾತ್ಕಾರದ ಅನುಭವದೆಡೆಗೆ ಕರೆದೊಯ್ಯು ವುದೋ ಅದನ್ನು ಪ್ರತೀಕವೆಂದು ಕರೆಯುತ್ತಾರೆ ಶಾಸ್ತ್ರಕಾರರು. ಧಾತು, ಕಲ್ಲು, ಕಟ್ಟಿಗೆ ಅಥವಾ ಮೃತ್ತಿಕೆ ಇತ್ಯಾದಿ ಪದಾರ್ಥಗಳಿಂದ ತಯಾರಿಸಿದ ಮೂರ್ತಿಯಲ್ಲಿ ಜಗತ್ತಿಗೆ ಕಾರಣವಾದ ಸೃಷ್ಟಿಸ್ಥಿತಿ ಗಳಾದಿ ಗುಣಗಳನ್ನು ಕಲ್ಪಿಸಿ ಪೂಜೆ, ಧ್ಯಾನಾದಿಗಳ ಸಹಾಯದಿಂದ ಜಗನ್ಮಾತೆಯ ಸ್ವರೂಪದ ಸಾಕ್ಷಾತ್ ಅನುಭವ ಪಡೆಯಲು ಮಾಡುವ ಪ್ರಯತ್ನವನ್ನೇ ಪ್ರತಿಮಾಪೂಜೆಯೆನ್ನುವುದು. 'ಅಬ್ರಹ್ಮಣಿ ಬ್ರಹ್ಮ ದೃಷ್ಟ್ಯಾನುಸಂಧಾನಮ್' ಅಂದರೆ ಯಾವುದು ಅಂತ್ಯವುಳ್ಳದ್ದೋ, ಸ್ವಭಾವದಿಂದ ಪೂರ್ಣಬ್ರಹ್ಮವಲ್ಲವೋ ಅದನ್ನು ಬ್ರಹ್ಮನ ಸ್ವರೂಪ ವೆಂದು ಪರಿಗಣಿಸಿ ಪೂರ್ಣಬ್ರಹ್ಮನ ಸ್ವರೂಪಾನುಭವವನ್ನು ತನ್ಮೂ ಲಕ ಪಡೆಯಲು ಪ್ರಯತ್ನಿಸುವುದೇ ಪ್ರತೀಕ ಹಾಗೂ ಪ್ರತಿಮಾ ಪೂಜೆ.'' *('ಭಾರತದಲ್ಲಿ ಶಕ್ತಿಪೂಜೆ', ಗ್ರಂಥಕಾರನ ನಿವೇದನೆ)*

ಶ್ರೀರಾಮಕೃಷ್ಣರು ಹೇಳಿದಂತೆ, ''ಬಣ್ಣದ ಹಣ್ಣನ್ನು ನೋಡಿ ದಾಗ ನಿಜವಾದ ಹಣ್ಣು ಜ್ಞಾಪಕಕ್ಕೆ ಬರುವಂತೆ ಮೃಣ್ಮಯೀ ಅಥವಾ ಪಾಷಾಣಮಯೀ ಮೂರ್ತಿಯನ್ನು ನೋಡಿದಾಗ ಚಿನ್ಮಯಿಯ ಭಾವನೆ ಉದ್ದೀಪನವಾಗುವುದು.''

''ಶಕ್ತಿಪೂಜೆಯು ವಿಶೇಷವಾಗಿ ಜಗತ್ತಿನ ಕಾರಣವನ್ನು ತಾಯಿ ಯೆಂದು, ಜಗದಂಬೆಯೆಂದು ಕರೆದು ಆರಾಧಿಸುವುದು, ಭಾರ ತದ ನೈಜ ಸಂಪತ್ತು. ಶಕ್ತಿಯು ಚೈತನ್ಯದೊಂದಿಗೆ ಮಿಲನವಾಗಿರು ವುದನ್ನು ಕಂಡು ವಿಶೇಷ ಪ್ರತೀಕಗಳಲ್ಲಿ ಅದರ ಆರಾಧನೆಯನ್ನು ಬಳಕೆಗೆ ತಂದರು. ಆಕಾಶಚುಂಬಿತ ಪರ್ವತಮಾಲೆ, ಸಾಗರ ವಾಹಿನೀ ನದಿ, ಉಷೆಯ ರಕ್ತ ಕಿರಣಗಳು ಇವುಗಳು ಭಾರತೀಯ ಋಷಿಗಳ ಕಣ್ಣಿಗೆ ಅನಂತ ಬ್ರಹ್ಮಾಂಡ ಪ್ರಸವಿಣೀ ದೇವಿಯ ಪ್ರತೀಕ ಸ್ವರೂಪವಾಗಿ ಕಂಡವು. ಅಲ್ಲಿ ಅವರಿಗೆ ಅವಳ ಸೌಮ್ಯ ಸೌಮ್ಯತರ ಮೂರ್ತಿ ಪ್ರಕಾಶವಾಯಿತು. ಅಮಾವಾಸ್ಯೆಯ ರಾತ್ರಿಯ ಸೂಚೀ ಭೇದ್ಯ ಅಂಧಕಾರ, ಮೃತ್ಯುವಿನ ನಿಷ್ಠುರ ಚಿತ್ರ, ಸ್ಮಶಾನದ ಕಠೋರ ಉದಾಸೀನತೆ – ಇವುಗಳೆಲ್ಲ ಆ ಕರಾಳವದನದಲ್ಲಿ ಕಂಡವು. ಹೀಗೆ ಕೋಮಲ– ಕಠೋರ ಭಾವ ಏಕಕಾಲದಲ್ಲಿ ಒಂದೆಡೆ ಇರುವುದು ಅವರಿಗೆ ತೋರಿತು. *(ಅಲ್ಲೇ, ಪು. ೧೩)*

''ಬಾಹ್ಯಾಂತರ ಭೇದಕ್ಕೆ ತಕ್ಕಂತೆ ಕಾಲಕ್ರಮೇಣ ಹಲವು ಪ್ರತೀಕ ಗಳು ಜಾರಿಗೆ ಬಂದವು. ಹಲವು ಪ್ರತೀಕಗಳಲ್ಲಿ ಮಾನವ ಶಕ್ತಿ ಯನ್ನು ಸಾಕ್ಷಾತ್ಕರಿಸಿಕೊಂಡನು. ಇವುಗಳೆಲ್ಲ ಭಗವಂತನ ಒಂದು ವಿಭೂತಿರೂಪ ಎಂದು ನೋಡಲು ಉಪಕ್ರಮಿಸಿದನು.'' *(ಅಲ್ಲೇ, ಪು. ೫೩)* ಗೀತೆಯ ಹತ್ತನೆಯ ಅಧ್ಯಾಯದಲ್ಲಿ ಪರಮಾತ್ಮನ ಅವ ತಾರವಾದ ಶ್ರೀ ಕೃಷ್ಣನು ಈ ವಿಭೂತಿಗಳನ್ನೇ ವಿವರಿಸಿ ಹೇಳಿದ್ದಾನೆ.

## ಶಕ್ತಿಪೀಠದ ಹಿನ್ನೆಲೆ

**'ಪೇತಂತಿ ಉಪವಿಶಂತಿ ಅಸ್ಮಿನ್ ಇತಿ ಪೀಠಂ'** – ಯಾವುದರ ಮೇಲೆ ಕುಳಿತುಕೊಳ್ಳುತ್ತಾರೊ ಅದೇ ಪೀಠ. ಶಕ್ತಿಪೀಠವೆಂದರೆ ಆದ್ಯಾಶಕ್ತಿ ಜಗನ್ಮಾತೆಯ ವಿಶೇಷ ವಾಸಸ್ಥಾನ. ಪ್ರತೀಕಗಳಲ್ಲಿ ಶಕ್ತಿಯ ಉಪಾಸನೆಗಾಗಿ ಅತ್ಯಂತ ಯೋಗ್ಯವಾದ ಪವಿತ್ರ ಸ್ಥಳ ಗಳನ್ನು ಋಷಿಗಳು ಶಕ್ತಿಪೀಠಗಳೆಂದು ಪ್ರತಿಷ್ಠಾಪಿಸಿ ತಾವೂ ಸಿದ್ಧಿ ಪಡೆದು ಲೋಕಕಲ್ಯಾಣಕ್ಕಾಗಿ ಸಮರ್ಪಿಸಿದ್ದಾರೆ.

ಇದರ ಹಿನ್ನೆಲೆಯಾಗಿ ಪುರಾಣಗಳಲ್ಲಿ ಪ್ರಸಿದ್ಧವಾದ ಕಥೆ ಯಿದೆ. ದಕ್ಷಪ್ರಜಾಪತಿಯ ಮಗಳಾದ ಸತಿಯು, ತಾನು ಪ್ರೇಮಿ ಸಿದ ಶಿವನನ್ನು ತನ್ನ ತಂದೆಯ ಇಚ್ಛೆಗೆ ವಿರುದ್ಧವಾಗಿ ಮದುವೆ ಯಾಗುತ್ತಾಳೆ. ಕೆಲವು ಕಾಲದ ನಂತರ ದಕ್ಷನು ಕ್ರತುವನ್ನು (ಯಾಗ ವನ್ನು) ಆಯೋಜಿಸುತ್ತಾನೆ. ಎಲ್ಲಾ ದೇವದೇವಿಯರನ್ನು ಕರೆಯು ತ್ತಾನೆ ಆದರೆ ಶಿವನನ್ನು ಅಪಮಾನಿಸಲು ಅದಕ್ಕೆ ಆಹ್ವಾನ ನೀಡಿ ರುವುದಿಲ್ಲ. ಸತಿಯು ತಂದೆಯ ಮನೆಗೆ ಹೋಗಲು ಯಾವ ಆಹ್ವಾ ನವೂ ಬೇಕಿಲ್ಲವೆಂದಾಗ ಶಿವನು ತಾನು ಬರುವುದಿಲ್ಲವೆನ್ನುತ್ತಾನೆ. ಸತಿಯು ತಂದೆಯ ಮನೆಗೆ ಯಾಗದಲ್ಲಿ ಭಾಗವಹಿಸಲು ಹೋಗು ವಳು. ದಕ್ಷನು ತನ್ನ ಮಗಳನ್ನೂ ಅಳಿಯನನ್ನೂ ನಿಂದಿಸಿ ಅಪ ಮಾನಿಸುತ್ತಾನೆ. ಸತಿಯು ಅದನ್ನು ಸಹಿಸಲಾರದೆ ದೇಹತ್ಯಾಗ ಮಾಡುತ್ತಾಳೆ. ಈ ವಿಚಾರ ತಿಳಿದ ಶಿವನು ತಕ್ಷಣವೇ ಅಲ್ಲಿಗೆ ಧಾವಿಸಿ, ತನ್ನ ಪತ್ನಿಯ ಮೃತಶರೀರವನ್ನು ಹೆಗಲೇರಿಸಿ ಕೋಪ ದಿಂದ ಅಲೆಯುತ್ತಿರುತ್ತಾನೆ. ಎಲ್ಲಿ ಪ್ರಳಯಮಾಡಿ ಬಿಡುವನೋ ಎಂಬ ಕಳವಳದಿಂದ ಮತ್ತು ಸತಿಯ ಶರೀರದ ಮೇಲೆ ಶಿವನಿಗೆ ಇದ್ದ ಮೋಹವನ್ನು ಕಳೆಯಲು ವಿಷ್ಣುವು ತನ್ನ ಸುದರ್ಶನ ಚಕ್ರ ದಿಂದ ಸತಿಯ ಶರೀರವನ್ನು ತುಂಡು ತುಂಡು ಮಾಡುತ್ತಾನೆ. ಈ ರೀತಿ ತುಂಡಾದ ಸತಿಯ ಶರೀರವು ೫೧ ಭಾಗಗಳಾಗಿ ಭರತ ಖಂಡದ ಮೇಲೆ ಬೀಳುತ್ತದೆ. ಆ ಸತಿಯ ಪ್ರತಿಯೊಂದು ಅಂಗ ಬಿದ್ದ ಸ್ಥಳವೂ ಒಂದೊಂದು ಶಕ್ತಿಪೀಠವಾದವು ಎಂಬ ಪ್ರತೀತಿ ಇದೆ.

## ಶಕ್ತಿಯ ಕಾರ್ಯ, ಮಾತೃಕಾವರ್ಣ ಮತ್ತು ಶಕ್ತಿಪೀಠಗಳ ಸಂಬಂಧ

ಸೃಷ್ಟಿಯಾಗುವುದಕ್ಕೆ ಮೊದಲು, ಅಂದರೆ ಅಖಂಡ ಸಚ್ಚಿದಾ ನಂದವು ತನ್ನನ್ನು ತಾನೇ ನಾಮ–ರೂಪಾತ್ಮಕವಾಗಿ ವ್ಯಕ್ತಗೊಳಿ ಸಲು ನಾಮ ಮೊದಲು ಹೊರಬಂದಿತು, ನಂತರ ರೂಪ. ನಾಮ ದಲ್ಲೂ ಮೊದಲು ಬಿಂದುವಿನಿಂದ ಅನಾಹತ ನಾದ, ಅದರಿಂದ

ವ್ಯಕ್ತ ಶಬ್ದ ಹೊರಬಂದಿತು. ಶಬ್ದ ಬಂದ ನಂತರ ಶಬ್ದಗಳ ರೂಪವಾದ ಅಕ್ಷರಗಳು ಮೂಡಿದವು. ಒಂದು ದೃಷ್ಟಿಯಲ್ಲಿ ಅಕ್ಷರಗಳು ಸೃಷ್ಟಿಯ ವಿಕಾಸದ ಮೂಲ ಹಂತಗಳಲ್ಲಿ ಒಂದು.

ವ್ಯಷ್ಟಿಯ ನೆಲೆಯಲ್ಲಿ ಚೈತನ್ಯವು ಸಹಸ್ರಾರದ ಮೂಲಕ ಸೂಕ್ಷ್ಮ ಶರೀರವನ್ನು ಪ್ರವೇಶಿಸಿ ಮೂಲಾಧಾರದಿಂದ ಆಜ್ಞಾ ವರೆಗೆ ವಿಕಾಸಗೊಳ್ಳುತ್ತದೆ. ಸೂಕ್ಷ್ಮ ಶರೀರದ ಪ್ರತಿಯೊಂದು ಚಕ್ರದಲ್ಲಿ ಈ ಅಕ್ಷರಗಳು ಮೂಲವಾಗಿ ಪ್ರತಿಷ್ಠಿತವಾಗಿವೆ. ಇದನ್ನೇ ನಾವು ಪೂಜೆಯಲ್ಲಿ ಬರುವ ವರ್ಣ ಮತ್ತು ಮಾತೃಕಾನ್ಯಾಸಗಳಲ್ಲಿ ಗಮನಿಸಬಹುದು. ಉದಾಃ ಚತುರ್ದಳವಾದ ಮೂಲಾಧಾರ ಪದ್ಮದಲ್ಲಿ 'ವ ಶ ಷ ಸ' ಅಕ್ಷರಗಳಾದರೆ, ಮಣಿಪೂರದ ೧೦ ದಳ ಕಮಲದಲ್ಲಿ ಎಲ್ಲಾ ಸ್ವರಗಳು ನ್ಯಸ್ತವಾಗಿವೆ ಮತ್ತು ದ್ವಿದಳದ ಆಜ್ಞಾಚಕ್ರದಲ್ಲಿ 'ಹ ಕ್ಷ' ಅಕ್ಷರಗಳು ನ್ಯಾಸ ಮಾಡಲ್ಪಡುತ್ತವೆ.

ಸಮಷ್ಟಿ ಪ್ರಪಂಚವೂ ವ್ಯಷ್ಟಿ ಪ್ರಪಂಚವೂ ಒಂದೇ ನಕ್ಷೆಯ ಅನುಸಾರದಂತೆ ಸೃಷ್ಟಿಯಾಗಿವೆ ಎಂಬ ಸಾಕ್ಷಾತ್ಕಾರ ಸ್ವಾಮಿ ವಿವೇಕಾನಂದರಿಗೆ ಗಾಢವಾದ ಧ್ಯಾನದಲ್ಲುಂಟಾಯಿತು. ಅವರ ಈ ಜ್ಞಾನದಂತೆ ಸಮಷ್ಟಿಯಲ್ಲೂ ಈ ಅಕ್ಷರಗಳೇ ಸೃಷ್ಟಿಯ ಆಧಾರವಾಗಿರುತ್ತವೆ.

ಪ್ರಾಯಶಃ ೫೧ ಶಕ್ತಿ ಪೀಠಗಳನ್ನು ಸಂಸ್ಕೃತದ ವರ್ಣಮಾಲೆಯಲ್ಲಿರುವ ೫೧ ಮಾತೃಕೆಗಳೊಂದಿಗೆ ಜೋಡಿಸಲಾಗಿದೆ, ಪ್ರತಿಯೊಂದೂ ಅವುಗಳಿಗೆ ಸಂಬಂಧಿಸಿದ ದೇವತೆಗಳಲ್ಲಿ ಒಂದನ್ನು ಆವಾಹಿಸುವ ಶಕ್ತಿಯನ್ನು ಹೊಂದಿದೆ. ಈ ವರ್ಣಮಾಲೆಗಳನ್ನು ಬೀಜ ಮಂತ್ರಗಳು ಅಥವಾ ಸೃಷ್ಟಿಯ ಮೂಲ ಶಬ್ದಗಳ ಬೀಜಗಳು ಎಂದು ಕರೆಯಲಾಗುತ್ತದೆ. ಈ ಶಕ್ತಿಯ ಕಾರ್ಯಕ್ಕೂ, ಮಾತೃಕಾವರ್ಣಗಳಿಗೂ ಮತ್ತು ಶಕ್ತಿಪೀಠಗಳಿಗೂ ಇರುವ ಸಾಮ್ಯತೆ ಮತ್ತು ಸಂಬಂಧವನ್ನು ಹೀಗೆ ಕಲ್ಪಿಸಬಹುದು.

'ತಂತ್ರಚೂಡಾಮಣಿ'ಯಲ್ಲಿ ೫೧ ಮತ್ತು 'ದೇವೀಭಾಗವತ'ದಲ್ಲಿ ೧೦೮ ಶಕ್ತಿಪೀಠಗಳನ್ನೂ ಉಲ್ಲೇಖಿಸಲಾಗಿದೆ. 'ತಂತ್ರಚೂಡಾಮಣಿ'ಯಲ್ಲಿ ಉಲ್ಲೇಖಿಸಲಾಗಿರುವ ೫೧ ಪೀಠಗಳನ್ನೇ ವಿದ್ವಾಂಸರೂ ಶಕ್ತಿಪೀಠಗಳೆಂದು ಪರಿಗಣಿಸಿದ್ದಾರೆ. ಸಂಸ್ಕೃತದ ವಿಶ್ವಕೋಶವೇ ಆಗಿರುವ 'ಶಬ್ದಕಲ್ಪದ್ರುಮ'ದ ಕರ್ತೃವೂ ಇದನ್ನು ಅನುಮೋದಿಸಿದ್ದಾರೆ. ಪ್ರತಿಯೊಂದು ಶಕ್ತಿಪೀಠದಲ್ಲಿ ಪೂಜಿಸಲ್ಪಡುವ ಜಗನ್ಮಾತೆಯ ಹೆಸರು, ಬಿದ್ದಂತಹ ಅಂಗ ಮತ್ತು ಅದಕ್ಕೆ ಸಂಬಂಧಿಸಿದ ಶಿವ ಸ್ವರೂಪನಾದ ಭೈರವ ಈ ವಿಷಯಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾಗಿದೆ.

| ಕ್ರ.ಸಂ | ಅಂಗ | ಶಕ್ತಿಯ ಹೆಸರು | ಭೈರವ | ಕ್ಷೇತ್ರ | ಪ್ರಸ್ತುತ ಸ್ಥಳದ ಹೆಸರು |
|---|---|---|---|---|---|
| ೧ | ಬ್ರಹ್ಮರಂಧ್ರ | ಕೋಟ್ಟರೀಸಾ | ಭೀಮಲೋಚನ | ಹಿಙ್ಗುಲ | ಹಿಂಗ್ಲಜ ಮಾತಾ (ಈಗಿನ ಪಾಕಿಸ್ತಾನ) |
| ೨ | ತ್ರಿನೇತ್ರ | ಮಹಿಷಮರ್ದಿನೀ | ಕ್ರೋಧೀಶ | ಶರ್ಕರಾರ | ಕೊಲ್ಹಾಪುರ |
| ೩ | ಮೂಗು | ಸುನಂದಾ | ತ್ರ್ಯಂಬಕ | ಸುಗಂಧಾ | ಶಿಕಾರ್‌ಪುರ್ |
| ೪ | ಕಂಠ | ಮಹಾಮಾಯಾ | ತ್ರಿಸಂಧ್ಯೇಶ್ವರ | ಕಾಶ್ಮೀರ | ಅಮರನಾಥ |
| ೫ | ನಾಲಿಗೆ | ಸಿದ್ಧಿದಾ/ ಅಂಬಿಕಾ | ಉನ್ಮತ್ತ | ಜ್ವಾಲಾಮುಖೀ | ಕಾಂಗ್ರಾ, ಹಿಮಾಚಲ ಪ್ರದೇಶ |
| ೬ | ಸ್ತನ | ತ್ರಿಪುರಮಾಲಿನೀ | ಭೀಷಣ | ಜಾಲಂಧರ | ಜಲಂಧರ |
| ೭ | ಹೃತ್ಪೀಠ | ಜಯದುರ್ಗಾ | ವೈದ್ಯನಾಥ | ವೈದ್ಯನಾಥ | ವೈದ್ಯನಾಥ |
| ೮ | ಮಂಡಿ | ಮಹಾಮಾಯಾ | ಕಪಾಲೀ | ನೇಪಾಲ | ಪಶುಪತಿನಾಥ |
| ೯ | ಬಲಹಸ್ತ | ದಾಕ್ಷಾಯಣೀ | ಅಮರ | ಮಾನಸ | ಮಾನಸರೋವರ |
| ೧೦ | ನಾಭಿ | ವಿಮಲಾ | ಜಗನ್ನಾಥ | ಉತ್ಕಲ | ಪುರೀ, ಒಡಿಶಾ |
| ೧೧ | ಬಲಗೆನ್ನೆ | ಗಂಡಕೀ ಚಂಡೀ | ಚಕ್ರಪಾಣಿ | ಗಂಡಕೀ | ಮುಕ್ತಿನಾಥ, ನೇಪಾಳ |
| ೧೨ | ಎಡತೋಳು | ಬಹುಲಾ | ಭೀರುಕ | ಬಹುಲಾ | ಕಾಟೋಅ, ಬೀರ್ಭುಮ್ |
| ೧೩ | ಮೊಣಕೈ | ಮಂಗಲಚಂಡಿಕಾ | ಕಪಿಲಾಂಬರ | ಉಜ್ಜಯಿನಿ | ಉಜ್ಜಯಿನಿ |
| ೧೪ | ಬಲತೋಳು | ಭವಾನೀ | ಚಂದ್ರಶೇಖರ | ಚಟ್ಟಲ | ಬಾಂಗ್ಲಾದೇಶ |
| ೧೫ | ಬಲಪಾದ | ತ್ರಿಪುರಾ | ತ್ರಿಪುರೇಶ | ತ್ರಿಪುರಾ | ಅಗರ್ತಲಾ |
| ೧೬ | ಎಡಪಾದ | ಭ್ರಾಮರೀ | ಅಂಬರ | ತ್ರಿಸ್ರೋತಾ | ಜಲ್ಪಾಯಿಗುರಿ |
| ೧೭ | ಯೋನಿ | ಕಾಮಾಖ್ಯಾ | ಉಮಾನಂದ | ಕಾಮಗಿರಿ | ಗೌಹಾಟಿ |
| ೧೮ | ಬಲ ಅಂಗುಷ್ಠ | ಭೂತಧಾತ್ರೀ | ಕ್ಷೀರಖಂಡಕ | ಯುಗಾದ್ಯ | |
| ೧೯ | ಬಲಪಾದ, ಬೆರಳುಗಳು | ಕಾಲಿಕಾ | ನಕುಲೀಶ | ಕಾಲೀಪೀಠ | ಕಾಳೀಘಾಟ್ |

| | | | | | |
|---|---|---|---|---|---|
| ೨೦ | ಕೈಬೆರಳುಗಳು | ಲಲಿತಾ | ಭವ | ಪ್ರಯಾಗ | ಪ್ರಯಾಗ |
| ೨೧ | ಎಡ ತೊಡೆ | ಜಯಂತೀ | ಕ್ರಮದೀಶ್ವರ | ಜಯಂತಿ | ಜಯಂತಿಯಾಬೆಟ್ಟ, ಮೇಘಾಲಯ |
| ೨೨ | ಕಿರೀಟ | ವಿಮಲಾ | ಸಂವರ್ತ | | |
| ೨೩ | ಕರ್ಣಕುಂಡಲ | ವಿಶಾಲಾಕ್ಷೀ | ಕಾಲಭೈರವ | ವಾರಾಣಸಿ | ವಾರಾಣಸಿ |
| ೨೪ | ಪೃಷ್ಠ | ಶರ್ವಾಣೀ | ನಿಮಿಷ | ಕನ್ಯಾಶ್ರಮ | ಕನ್ಯಾಕುಮಾರಿ |
| ೨೫ | ಬಲ ಹಿಮ್ಮಡಿ | ಸಾವಿತ್ರೀ | ಸ್ಥಾಣು | ಕುರುಕ್ಷೇತ್ರ | ಕುರುಕ್ಷೇತ್ರ |
| ೨೬ | ಅಂಗೈ | ಗಾಯತ್ರೀ | ಸರ್ವಾನಂದ | ಮಣಿವೇದಿಕೆ | ಪುಷ್ಕರ |
| ೨೭ | ಕತ್ತು | ಮಹಾಲಕ್ಷ್ಮೀ | ಶಂಬರಾನಂದ | ಶ್ರೀಶೈಲ | ಶ್ರೀಶೈಲ |
| ೨೮ | ಒಡ್ಯಾಣ/ ಡಾಬು | ದೇವಗರ್ಭಾ | ರುರು | ಕಙ್ಕಾಲೀ | ಕಾಂಚೀ |
| ೨೯ | ನಿತಂಬ | ಕಾಳೀ | ಅಸಿತಾಂಗ | ಕಾಲಮಾಧವ | ಅಮರಕಂಟಕ್ |
| ೩೦ | ಸ್ತನ/ಸೊಂಟದ ಮೂಳೆ | ಶಿವಾನೀ | ಚಂಡಭೈರವ | ರಾಮಗಿರಿ | ಚಿತ್ರಕೂಟ |
| ೩೧ | ಕೇಶಜಾಲ | ಉಮಾ | ಭೂತೇಶ | ವೃಂದಾವನ | ವೃಂದಾವನ |
| ೩೨ | ಮೇಲ್ಪಂಕ್ತಿಯ ಹಲ್ಲುಗಳು | ನಾರಾಯಣೀ | ಸಂಹಾರ | ಶುಚಿ | ಶುಚೀಂದ್ರಮ್ |
| ೩೩ | ಕೆಳಪಂಕ್ತಿಯ ಹಲ್ಲುಗಳು | ವಾರಾಹೀ | ಮಹಾರುದ್ರ | ಪಂಚಸಾಗರ | ಪಂಚಸಾಗರ |
| ೩೪ | ವಾಮತಲ್ಪ | ಅಪರ್ಣಾ | ವಾಮನ | ಕರತೋಯಾತಟ | ಭವಾನೀಪುರ |
| ೩೫ | ಬಲತಲ್ಪ | ಶ್ರೀಸುಂದರೀ | ಸುಂದರಾನಂದ | ಶ್ರೀಪರ್ವತ | ಲದಾಖ್ |
| ೩೬ | ಎಡ ಹಿಮ್ಮಡಿ | ಕಪಾಲಿನೀ | ಶರ್ವಾನಂದ | ವಿಭಾಷ | ತೊಮ್ಲುಕ |
| ೩೭ | ಹೊಟ್ಟೆ | ಚಂದ್ರಭಾಗಾ | ವಕ್ರತುಂಡ | ಪ್ರಭಾಸ | ಗಿರ್‌ನಾರ್ |
| ೩೮ | ಮೇಲ್ತುಟಿ | ಅವಂತೀ | ಲಂಬಕಣು | ಭೈರವಪರ್ವತ | ಉಜ್ಜೈನಿ |
| ೩೯ | ಗಲ್ಲ | ಭ್ರಾಮರೀ | ವಿಕೃತಾಕ್ಷ | ಪಂಚವಟೀ | ನಾಸಿಕ |
| ೪೦ | ಎಡಗೆನ್ನೆ | ವಿಶ್ವೇಶೀ | ದಂಡಪಾಣಿ | ಗೋದಾವರೀತೀರ | ಆಂಧ್ರಪ್ರದೇಶ |
| ೪೧ | ಬಲಭುಜ | ಕುಮಾರೀ | ಶಿವ | ರತ್ನಾವಲೀ | ಚೆನ್ನೈ |
| ೪೨ | ಎಡಭುಜ | ಉಮಾ | ಮಹೋದರ | ಮಿಥಿಲಾ | ಬಿಹಾರ |
| ೪೩ | ನಾಳ | ಕಾಲಿಕಾ | ಯೋಗೇಶ | ನಾಲಹಾಟಿ | ಕೊಲ್ಕತ್ತ |
| ೪೪ | ಕಿವಿ | ಜಯದುರ್ಗಾ | ಅಭೀರು | ಕರ್ಣಾಟಕ | |
| ೪೫ | ಮನಸ್ಸು | ಮಹಿಷಮರ್ದಿನೀ | ವಕ್ರನಾಥ | ವಕ್ರೇಶ್ವರ | ಪಶ್ಚಿಮ ವಂಗ |
| ೪೬ | ಪಾಣಿಪದ್ಮ | ಯಶರೇಶ್ವರೀ | ಚಂಡ | ಜಶೋರ್ | ಬಾಂಗ್ಲಾದೇಶ |
| ೪೭ | ಅಧರ / ಕೆಳದುಟಿ | ಫುಲ್ಲರಾ | ವಿಶ್ವೇಶ | ಲಾಭಪುರ | ಪಶ್ಚಿಮ ವಂಗ |
| ೪೮ | ಹಾರ | ನಂದಿನೀ | ನಂದಿಕೇಶ್ವರ | ನಂದಿಪುರ | ಪಶ್ಚಿಮ ವಂಗ |
| ೪೯ | ಗೆಜ್ಜೆ | ಇಂದ್ರಾಕ್ಷೀ | ರಾಕ್ಷಸೇಶ್ವರ | ಲಙ್ಕಾ | |
| ೫೦ | ಕಾಲಿನ ಬೆರಳುಗಳು | ಅಂಬಿಕಾ | ಅಮೃತಾಕ್ಷ | ವಿರಾಟ | ರಾಜಸ್ಥಾನ |
| ೫೧ | ಬಲ ತೊಡೆ | ಸರ್ವಾನಂದಕರೀ | ವ್ಯೋಮಕೇಶ | ಮಗಧ | ಬಿಹಾರ |

### ಶಕ್ತಿಪೀಠಗಳ ತೀರ್ಥಯಾತ್ರೆ

ಒಂದೇ ಜನ್ಮದಲ್ಲಿ ೫೧ ಶಕ್ತಿಪೀಠಗಳನ್ನೂ ಸಂದರ್ಶಿಸುವುದು ಕಷ್ಟಸಾಧ್ಯ. ಆದಿಶಕ್ತಿಪೀಠಗಳು ನಾಲ್ಕು ಎಂದು ಕಾಲಿಕಾ ಪುರಾಣವು ಸಾರುತ್ತದೆ. ಅವು : ೧. ಪುರಿಯ ವಿಮಲಾ ೨. ಕೊಲ್ಕತ್ತದ ಕಾಲೀಘಾಟ್ ೩. ಅಸ್ಸಾಂನ ಕಾಮಾಖ್ಯಾ ೪. ಬರಹಂಪುರದ ತಾರಿಣೀ. ಈ ನಾಲ್ಕು ಆದಿಶಕ್ತಿಪೀಠಗಳಲ್ಲಿ ಮೂರನ್ನು ಸಂದರ್ಶಿಸುವ ಭಾಗ್ಯ ಜಗನ್ಮಾತೆಯ ಕೃಪೆಯಿಂದ ಬಯಸದೇ ನಮ್ಮದಾಯಿತು. ಅವುಗಳನ್ನು ಸಂಕ್ಷೇಪವಾಗಿ ಇಲ್ಲಿ ವರ್ಣಿಸುತ್ತಿದ್ದೇವೆ.

## ವಿಮಲಾದೇವಿ

ವಿಮಲಾದೇವಿ ದೇವಸ್ಥಾನವು ಒಡಿಶಾ ರಾಜ್ಯದ ಪುರಿಯಲ್ಲಿರುವ ಜಗನ್ನಾಥ ದೇವಾಲಯದ ಸಂಕೀರ್ಣದಲ್ಲಿದೆ. ಈ ದೇವಾಲಯವು ಜಗನ್ನಾಥ ದೇವಾಲಯ ಸಂಕೀರ್ಣದ ಒಳ ಆವರಣದ ನೈಋತ್ಯ ಮೂಲೆಯಲ್ಲಿ ಮತ್ತು ಜಗನ್ನಾಥನ ಗೋಪುರದ ಪಶ್ಚಿಮ ಮೂಲೆಯಲ್ಲಿ ಪವಿತ್ರ ಕೊಳದ ರೋಹಿಣಿ ಕುಂಡದ ಪಕ್ಕದಲ್ಲಿದೆ. ದೇವಾಲಯವು ಪೂರ್ವಕ್ಕೆ ಮುಖ ಮಾಡಿದೆ. ಇದನ್ನು ನಾಲ್ಕು ಘಟಕಗಳೊಂದಿಗೆ ನಿರ್ಮಿಸಲಾಗಿದೆ; ವಿಮಾನ (ಗರ್ಭ ಗೃಹವನ್ನು ಒಳಗೊಂಡಿರುವ ರಚನೆ), ಜಗಮೋಹನ (ಅಸೆಂಬ್ಲಿ ಹಾಲ್), ನಾಟ-ಮಂಡಪ (ಉತ್ಸವದ ಸಭಾಂಗಣ) ಮತ್ತು ಭೋಗ-ಮಂಡಪ (ಅರ್ಪಣೆಗಳ ಸಭಾಂಗಣ).



ಜಗನ್ನಾಥ ಮಂದಿರ ಸಂಕೀರ್ಣದಲ್ಲಿ ಇದು ಒಂದು ಸಣ್ಣ ದೇವಾಲಯವಾಗಿದ್ದರೂ, ಶಾಕ್ತ ಮತ್ತು ತಾಂತ್ರಿಕ ಆರಾಧಕರಿಗೆ ಮುಖ್ಯವಾಗಿದೆ. ಅವರು ಇದನ್ನು ಜಗನ್ನಾಥ ದೇವಾಲಯಕ್ಕಿಂತ ಹೆಚ್ಚು ಪೂಜಿಸುತ್ತಾರೆ. ವಿಮಲಾ ಜಗನ್ನಾಥನ ಸಹೋದರಿ ಮತ್ತು ದೇವಾಲಯ ಸಂಕೀರ್ಣದ ರಕ್ಷಕಿ ಎಂದು ಪರಿಗಣಿಸಲಾಗಿದೆ. ಮುಖ್ಯ ದೇವಾಲಯದಲ್ಲಿ ಜಗನ್ನಾಥನನ್ನು ಪೂಜಿಸುವ ಮೊದಲು ಭಕ್ತರು ವಿಮಲಾಗೆ ಗೌರವ ಸಲ್ಲಿಸುತ್ತಾರೆ. ಜಗನ್ನಾಥನಿಗೆ ಅರ್ಪಿಸಿದ ಆಹಾರವು ವಿಮಲಾದೇವಿಗೆ ಅರ್ಪಿಸುವವರೆಗೆ ಮಹಾಪ್ರಸಾದವಾಗಿ ಪವಿತ್ರವಾಗುವುದಿಲ್ಲ. ಆಶ್ವಯುಜ ಮಾಸದಲ್ಲಿ ದೇವಿ-ಆಧಾರಿತ ಹಬ್ಬವಾದ ದುರ್ಗಾಪೂಜೆಯನ್ನು ವಿಮಲಾ ದಲ್ಲಿ ಹದಿನಾರು ದಿನಗಳ ಕಾಲ ಆಚರಿಸಲಾಗುತ್ತದೆ, ವಿಜಯ ದಶಮಿಯೊಂದಿಗೆ ಕೊನೆಗೊಳ್ಳುತ್ತದೆ.

## ಕಾಮಾಖ್ಯಾ

ಅಸ್ಸಾಂ ರಾಜ್ಯದ ಗುವಾಹಾಟಿಯ ಹತ್ತಿರವಿರುವ ನೀಲಾಚಲ ಬೆಟ್ಟದಲ್ಲಿರುವ ಕಾಮಾಖ್ಯಾ ದೇವಾಲಯವು ತಾಂತ್ರಿಕ ಆಚರಣೆಗಳ ಅತ್ಯಂತ ಹಳೆಯ ಪ್ರಧಾನ ಕೇಂದ್ರಗಳಲ್ಲಿ ಒಂದಾಗಿದೆ. ಮೂಲತಃ ದೇವತೆಯ ಆರಾಧನೆಯ ಸ್ವಯಂಪ್ರೇರಿತ ಸ್ಥಳವಾಗಿದ್ದು, ಇಲ್ಲಿ ನೈಸರ್ಗಿಕ ಕಲ್ಲಿನಲ್ಲಿ ಜಗನ್ಮಾತೆಯ ಯೋನಿಯ ಆರಾಧನೆಯು ನಡೆದುಕೊಂಡು ಬಂದಿದೆ.

ಮುಖ್ಯ ದೇವಾಲಯವು ದಶಮಹಾವಿದ್ಯೆಗಳಾದ ಕಾಳಿ, ತಾರಾ, ತ್ರಿಪುರಸುಂದರಿ, ಭುವನೇಶ್ವರಿ, ಭೈರವಿ, ಛಿನ್ನಮಸ್ತಾ, ಧೂಮಾವತಿ, ಬಗಲಾಮುಖಿ, ಮಾತಂಗಿ ಮತ್ತು ಕಮಲಾತ್ಮಿಕೆ



ಯರಿಗೆ ಸಮರ್ಪಿತವಾದ ಪ್ರತ್ಯೇಕ ದೇವಾಲಯಗಳ ಸಂಕೀರ್ಣದಿಂದ ಸುತ್ತುವರೆದಿದೆ. ಇವುಗಳಲ್ಲಿ, ತ್ರಿಪುರಸುಂದರಿ, ಮಾತಂಗಿ ಮತ್ತು ಕಮಲಾ ಮುಖ್ಯ ದೇವಾಲಯದ ಒಳಗೆ ವಾಸಿಸುತ್ತಾರೆ. ಆದರೆ ಇತರ ಏಳು ದೇವಿಯರು ಪ್ರತ್ಯೇಕ ದೇವಾಲಯಗಳಲ್ಲಿ ವಾಸಿಸುತ್ತಾರೆ. ಪ್ರತ್ಯೇಕ ಮಹಾವಿದ್ಯೆಗಳಿಗಾಗಿ ಇರುವ ದೇವಾಲಯಗಳು ಒಂದು ಗುಂಪಾಗಿ, ಒಂದೇ ಸಂಕೀರ್ಣದಲ್ಲಿ ಕಂಡುಬರುವುದು ಅಪರೂಪ ಮತ್ತು ಅಸಾಮಾನ್ಯವಾಗಿದೆ.

ದೇವಾಲಯವು ನಾಲ್ಕು ಭಾಗಗಳನ್ನು ಒಳಗೊಂಡಿದೆ: ಗರ್ಭಗೃಹ ಮತ್ತು ಚಲಂತ, ಪಂಚರತ್ನ ಮತ್ತು ನಾಟಮಂದಿರ ಎಂಬ ಮೂರು ಮಂಟಪಗಳು ಪೂರ್ವದಿಂದ ಪಶ್ಚಿಮಕ್ಕೆ ಒಂದಕ್ಕೊಂದು ಹೊಂದಿಕೊಂಡಿವೆ. ಕೆಳಗಿನ ಭಾಗವು ಕಲ್ಲಿನಿಂದ ಕೂಡಿದ್ದರೂ, ಬಹುಭುಜಾಕೃತಿಯ ಜೇನುಗೂಡಿನ ಗುಮ್ಮಟದ ಆಕಾರದಲ್ಲಿರುವ ಶಿಖರವು ಇಟ್ಟಿಗೆಯಿಂದ ಮಾಡಲ್ಪಟ್ಟಿದೆ, ಇದು ಕಾಮರೂಪದಲ್ಲಿರುವ ದೇವಾಲಯಗಳ ವಿಶಿಷ್ಟ ಲಕ್ಷಣವಾಗಿದೆ.

ಶಿಖರದ ಒಳಗಿನ ಗರ್ಭಗೃಹವು ನೆಲಮಟ್ಟದಿಂದ ಕೆಳಗಿದೆ ಮತ್ತು ಯಾವುದೇ ಬಿಂಬವನ್ನು ಹೊಂದಿರುವುದಿಲ್ಲ. ಗರ್ಭಗೃಹವು ಚಿಕ್ಕದಾಗಿದೆ, ಗುಹೆಯಂತಿದೆ ಮತ್ತು ಕಿರಿದಾದ ಕಲ್ಲಿನ ಮೆಟ್ಟಿಲುಗಳಿಂದ ತಲುಪುತ್ತದೆ. ಗುಹೆಯ ಒಳಭಾಗದಲ್ಲಿ ಯೋನಿ ಆಕಾರದಲ್ಲಿರುವ ಬಂಡೆಯ ಬಿರುಕಿದೆ. ಅದು ನೈಸರ್ಗಿಕ ಬುಗ್ಗೆಯ ನೀರಿನಿಂದ ತುಂಬಿರುತ್ತದೆ. ಇದನ್ನು ಸ್ವತಃ ಕಾಮಾಖ್ಯ ದೇವತೆಯಾಗಿ ಪೂಜಿಸಲಾಗುತ್ತದೆ. ಅಂಬುಬಾಚಿ ಮೇಳ ಕಾಮಾಖ್ಯ ದೇವಸ್ಥಾನದಲ್ಲಿ ನಡೆಯುವ ವಾರ್ಷಿಕ ಉತ್ಸವವಾಗಿದೆ. ಇದನ್ನು ಮಳೆಗಾಲದಲ್ಲಿ ಆಷಾಢ ಮಾಸದಲ್ಲಿ ಸೂರ್ಯನು ಮಿಥುನ ರಾಶಿಯನ್ನು ಪ್ರವೇಶಿಸಿದಾಗ ಆಚರಿಸಲಾಗುತ್ತದೆ.

## ಕಾಳಿಘಾಟ್

ಕಾಳಿಘಾಟ್ ಕಾಳಿ ದೇವಸ್ಥಾನವು ಕೋಲ್ಕತ್ತಾದ ಚೌರಿಂಗಿ ಸಮೀಪದಲ್ಲಿರುವ ಶಕ್ತಿ ಪೀಠ. ಇದು ಗಂಗಾನದಿಯ ಹಳೆಯ ಪಥದಲ್ಲಿರುವ (ಆದಿಗಂಗಾ) ಪವಿತ್ರವಾದ ಘಟ್ಟ. ಕಾಲಾಂತರದಲ್ಲಿ ನದಿಯು ದೇವಾಲಯದಿಂದ ದೂರ ಸರಿದಿದೆ. ಈ ದೇವಾಲಯವು ಈಗ ಗಂಗೆಯನ್ನು ಸೇರುವ ಆದಿಗಂಗಾ ಎಂಬ ಸಣ್ಣ ಕಾಲುವೆಯ ದಡದಲ್ಲಿದೆ. ಕಾಳಿಘಾಟ್, ದಾಕ್ಷಾಯಣಿ ಅಥವಾ

ಸತಿಯ ಬಲ ಪಾದದ ಬೆರಳುಗಳು ಬಿದ್ದ ಸ್ಥಳವನ್ನು ಪ್ರತಿನಿಧಿಸುತ್ತದೆ. ಕೋಲ್ಕತ್ತಾ ಎಂಬ ಹೆಸರು ಕಾಳಿಘಾಟ್ ದೇವಾಲಯದ ಕಾಳಿಕಾತಾ ದೇವಿ ಎಂಬ ಪದದಿಂದ ಬಂದಿದೆ ಎಂದು ಹೇಳಲಾಗುತ್ತದೆ. ಇಲ್ಲಿರುವ ಶಕ್ತಿಯು ದಕ್ಷಿಣಾ ಕಾಳಿ (ವಿಶ್ವೋಪಕಾರಿ ತಾಯಿ) ಆಗಿದ್ದು ಭೈರವನು ನಕುಲೀಶ ಅಥವಾ ನಕುಲೇಶ್ವರ.

ಮಂದಿರ ಸಂಕೀರ್ಣದಲ್ಲಿ ನಾಲ್ಕು ಮುಖ್ಯಾಂಶಗಳಿವೆ.

ಷಷ್ಠಿತಲಾ ಅಥವಾ ಮನಸಾತಲಾ — ಇದು ಸುಮಾರು ಮೂರು ಅಡಿ ಎತ್ತರದ ಆಯತಾಕಾರದ ವೇದಿಕೆಯಾಗಿದೆ. ಮರದ ಕೆಳಗೆ, ವೇದಿಕೆಯ ಮೇಲೆ ಮೂರು ಕಲ್ಲುಗಳನ್ನು ಅಕ್ಕಪಕ್ಕದಲ್ಲಿ ಎಡದಿಂದ ಬಲಕ್ಕೆ ಇರಿಸಲಾಗಿದೆ - ಷಷ್ಠಿ, ಶೀತಲಾ ಮತ್ತು ಮಂಗಲಚಂಡಿ ದೇವತೆಗಳನ್ನು ಪ್ರತಿನಿಧಿಸುವ ಈ ಪವಿತ್ರ ಸ್ಥಳವನ್ನು ಷಷ್ಠಿತಲಾ ಅಥವಾ ಮನಸಾತಲಾ ಎಂದು ಕರೆಯಲಾಗುತ್ತದೆ. ಇಲ್ಲಿ ಯಾವುದೇ ದೈನಂದಿನ ಪೂಜೆ ಅಥವಾ ಭೋಗ್ (ಆಹಾರ ನೈವೇದ್ಯ) ಮಾಡಲಾಗುವುದಿಲ್ಲ. ಇಲ್ಲಿರುವ ದೇವತೆಗಳನ್ನು ಕಾಳಿಯ ಅಂಶವೆಂದು ಪರಿಗಣಿಸಲಾಗುತ್ತದೆ.



ಹರ್ಕತ್ ತಲಾ — ಇದು ಬಲಿಗಾಗಿ ದಕ್ಷಿಣಾಭಿಮುಖವಾಗಿರುವ ನಾಟ್‌ಮಂದಿರದ ಪಕ್ಕದಲ್ಲಿರುವ ತಾಣವಾಗಿದೆ. ಅಕ್ಕಪಕ್ಕದಲ್ಲಿ ಪ್ರಾಣಿ ಬಲಿಗಾಗಿ ಎರಡು ಬಲಿಪೀಠಗಳಿವೆ. ಇವುಗಳನ್ನು ಹರಿ-ಕತ್ ಎಂದು ಕರೆಯಲಾಗುತ್ತದೆ.

ರಾಧಾ-ಕೃಷ್ಣ ದೇವಾಲಯ — ಈ ದೇವಾಲಯವನ್ನು ಶ್ಯಾಮರಾಯ ದೇವಾಲಯ ಎಂದು ಕರೆಯಲಾಗುತ್ತದೆ ಮತ್ತು ಇದು ದೇವಾಲಯದ ಒಳಗೆ ಮುಖ್ಯ ದೇವಾಲಯದ ಪಶ್ಚಿಮ ಭಾಗದಲ್ಲಿದೆ.

ಕುಂಡುಪುಕುರ್ - ಇದು ದೇವಾಲಯದ ಆಗ್ನೇಯದಲ್ಲಿ ಗಡಿ ಗೋಡೆಗಳ ಹೊರಗೆ ಇರುವ ಪವಿತ್ರ ಪುಷ್ಕರಿಣಿಯಾಗಿದೆ. ಈ ಕೊಳವು ಆದಿಗಂಗೆಯೊಂದಿಗೆ ಅಂತರ್ಗತ ಸಂಪರ್ಕ ಹೊಂದಿದೆ.

**ಉಪಸಂಹಾರ**

ವೇದಗಳ ನಂತರ ಮಾನ್ಯತೆ ಪಡೆದಿರುವ ಶಕ್ತಿಪ್ರಧಾನವಾದ ಹಲವು ಪುರಾಣ-ತಂತ್ರ-ಆಗಮಗಳಲ್ಲಿ ಪರಾಶಕ್ತಿ ಜಗನ್ಮಾತೆಯ ಮಹಿಮೆಯನ್ನು ಸಾರುವ ಅಖ್ಯಾನಗಳು ಉಲ್ಲೇಖಿಸಲ್ಪಟ್ಟಿವೆ. ಅಲ್ಲಿ ಶಕ್ತಿಯನ್ನೇ ಸರ್ವೋಪರಿಯಾಗಿ ಕೊಂಡಾಡಲಾಗಿದೆ.

ಶಕ್ತಿಯ ವಿಚಿತ್ರಪ್ರಭಾವದಿಂದ ಸಾಸಿವೆಕಾಳಿಗಿಂತ ಸಣ್ಣದಾದ ಬೀಜದಲ್ಲಿ ವಿಶಾಲವೃಕ್ಷ ಅಂತರ್ಗತವಾಗಿರುವಂತೆ, ಮಾಂಸಪಿಂಡದ ಮನುಷ್ಯದೇಹದಲ್ಲಿ ಜಡಜಗನ್ನಿಯಾಮಿಕಾ ಚೈತನ್ಯಮಯಿ ಬುದ್ಧಿ ಇರುವಂತೆ, ಆಕಾಶಕ್ಕಿಂತ ಸೂಕ್ಷ್ಮವಾಗಿರುವ ಇಂದ್ರಿಯಾತೀತ ಮನಸ್ಸಿನಲ್ಲಿ ಸಮಸ್ತ ವಿಶ್ವಸಂಸಾರವು ಪ್ರತಿಷ್ಠಿತವಾಗಿದೆ. ಸ್ಥೂಲ ಶಕ್ತಿಯ ಪ್ರಭಾವವೇ ಇಷ್ಟು ಅದ್ಭುತವಾದರೆ ಅಂತರ್ಜಗನ್ನಿಯಾಮಕ ಆಧ್ಯಾತ್ಮಿಕ ಶಕ್ತಿಯ ಮಹಿಮೆಗೆ ಅಂತ್ಯವೆಲ್ಲಿದೆ!

ಜಗನ್ಮಾತೆಯನ್ನು ಶಕ್ತಿಪೀಠಗಳಲ್ಲಷ್ಟೇ ಸಂದರ್ಶಿಸದೆ, ಅಲ್ಲಿ ಪೂಜಿಸಲ್ಪಡುವ ಪ್ರತೀಕದಲ್ಲಿ ಮಾತ್ರ ಜಗದಂಬೆಯಿರುವಳು ಎಂಬ ಸಂಕೀರ್ಣ ಮನೋಭಾವಕ್ಕೆ ಆಸ್ಪದ ಕೊಡದೆ, ಆ ಶಕ್ತಿಯು ಎಲ್ಲ ಚರಾಚರವಸ್ತುಗಳಲ್ಲಿಯೂ ಓತಪ್ರೋತವಾಗಿದೆಯೆಂದು ಅರಿತು ಸಾಧನೆಯಲ್ಲಿ ಅಗ್ರಸರನಾದರೆ, ಸಮಾಧಿ ಸಿದ್ಧಿಸುವುದು ನಿಶ್ಚಿತವೆಂದು ದೇಹಧಾರಿಣಿಯಾಗಿದ್ದ ಸಾಕ್ಷಾದ್ ಜಗನ್ಮಾತೆಯ ಸೇವಕರಾದ ಸ್ವಾಮಿ ಸಾರದಾನಂದರು ಬರೆಯುತ್ತಾರೆ. *(ಅಲ್ಲೇ, ನಿವೇ.)*

ನಾರೀಪ್ರತೀಕದಲ್ಲಿ ಮಾತೃಭಾವದಿಂದ ಜಗಚ್ಛಕ್ತಿರೂಪಿಣಿ ಜಗದಂಬೆಯನ್ನು ಉಪಾಸನೆ ಮಾಡಿ ಜಗತ್ತಿನ ಎಲ್ಲ ನಾರಿಯರಲ್ಲೂ ಜಗದಂಬೆಯ ವಿಶೇಷ ಶಕ್ತಿಪ್ರಕಾಶವನ್ನು ಅವಳ ಅಪಾರ ಕರುಣೆಯಿಂದ ಅನುಭವಿಸಿ ಧನ್ಯರಾಗೋಣ.

**ಸಂಮೋಹಿತಂ ದೇವಿ ಸಮಸ್ತಮೇತತ್**
**ತ್ವಂ ವೈ ಪ್ರಸನ್ನಾ ಭುವಿ ಮುಕ್ತಿಹೇತುಃ ॥**

*(ಶ್ರೀ ದುರ್ಗಾಸಪ್ತಶತೀ, ೧೧.೩)*

**ವಿದ್ಯಾಃ ಸಮಸ್ತಾಃ ತವ ದೇವಿ ಭೇದಾಃ**
**ಸ್ತ್ರಿಯಃ ಸಮಸ್ತಾಃ ಸಕಲಾ ಜಗತ್ಸು ।**
**ತ್ವಯೈಕಯಾ ಪೂರಿತಮಂಬಯೈತತ್**
**ಕಾ ತೇ ಸ್ತುತಿಃ ಸ್ತವ್ಯಪರಾಪರೋಕ್ತಿಃ ॥**

*(ಶ್ರೀ ದುರ್ಗಾಸಪ್ತಶತೀ, ೧೧.೪)*

'ಇಡೀ ಬ್ರಹ್ಮಾಂಡವನ್ನೇ ನಿನ್ನ ಮಾಯೆಯಿಂದ ಮುಗ್ಧಗೊಳಿಸಿದ್ದೀಯೆ. ನೀನು ಪ್ರಸನ್ನಳಾದೊಡೆ ಮುಕ್ತಿಯ ದ್ವಾರ ತೆರೆದಂತೆ. ವಿದ್ಯೆಗಳೆಲ್ಲವೂ ನಿನ್ನದೇ ಪ್ರಭೇದಗಳು, ಎಲ್ಲ ಸ್ತ್ರೀಯರೂ ನಿನ್ನದೇ ವಿಭಿನ್ನ ರೂಪ. ಪ್ರಪಂಚವೆಲ್ಲವೂ ನಿನ್ನಿಂದಲೇ ಪೂರಿತವಾಗಿರಲು ಯಾವ ಪರಾಪರಸ್ತುತಿಯಿಂದ ನಿನ್ನನ್ನು ಸ್ತುತಿಸಲಿ? ✽

ನೀರು ಮತ್ತು ಅದರ ತೋಯಿಸುವ ಶಕ್ತಿಯಂತೆ ಚಿಚ್ಛಕ್ತಿಗೂ ವೇದಾಂತದ ಬ್ರಹ್ಮ ನಿಗೂ ಅಭೇದ. ನೀರಿನ ತೋಯಿಸುವ ಶಕ್ತಿಯನ್ನು ಭಾವಿಸಿದರೆ ನೀರನ್ನು ಭಾವಿಸಬೇಕಾಗುತ್ತದೆ; ನೀರನ್ನು ಭಾವಿಸಿದರೆ ನೀರಿನ ತೋಯಿಸುವ ಶಕ್ತಿಯ ಭಾವನೆ ಬಂದೇ ಬಿಡುತ್ತದೆ. ಹಾವು ಮತ್ತು ಅದರ ವಕ್ರಗತಿ; ವಕ್ರಗತಿಯನ್ನು ಭಾವಿಸಿದರೆ ಸರ್ಪವನ್ನು ಭಾವಿಸಲೇಬೇಕಾಗುತ್ತದೆ.

— ಶ್ರೀರಾಮಕೃಷ್ಣರು